**ಶ್ರೀ ಎಸ್.ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು)** : ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಸಭೆಯ ನಿಯಮಗಳ ಸಮಿತಿಯು ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳಿಗೆ ತಿದ್ದುಪಡಿ ತರುವ ಬಗ್ಗೆ ಮಂಡಿಸಿದ ವರದಿಯನ್ನು ಸಭೆಯು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಅಧ್ಯಕ್ಷರು** : ಪ್ರಸ್ತಾವ ಏನೆಂದರೆ,

"ಕರ್ನಾಟಕ ವಿಧಾನ ಸಭೆಯ ನಿಯಮಗಳ ಸಮಿತಿಯು ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳಿಗೆ ತಿದ್ದುಪಡಿ ತರುವ ಬಗ್ಗೆ ಮಂಡಿಸಿದ ವರದಿಯನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ನಿಯಮಾವಳಿ ಸಮಿತಿ ವರದಿಗೆ ಒಪ್ಪಿಗೆ ನೀಡಲಾಯಿತು**

## 5. ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು :

**ವಿಷಯ: (ಅ) ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ಪುರಸಭೆಯ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಯೋಜನೆ ಅನುಷ್ಠಾನಗೊಳಿಸುವ ಬಗ್ಗೆ.**

\- - -

**ಶ್ರೀ ಬಿ. ರಮಾನಾಥ ರೈ (ಬಂಟ್ವಾಳ)** : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ಪುರಸಭೆಯ ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಗಂಭೀರ ಸಮಸ್ಯೆ ಇದೆ. ಈಗಾಗಲೇ ಇಲಾಖೆಯವರು ಎರಡನೇ ಹಂತದ ಕುಡಿಯುವ ನೀರಿನ ಯೋಜನೆಯ ಅನುಷ್ಠಾನಕ್ಕಾಗಿ ಯೋಜನೆ ರೂಪಿಸಿದ್ದಾರೆ. ಇದನ್ನು ಶೀಘ್ರ ಅನುಷ್ಠಾನಗೊಳಿಸಿ, ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವ ಬಗ್ಗೆ ನಿರ್ದಿಷ್ಟವಾದಂತಹ ಉತ್ತರವನ್ನು ನೀಡಬೇಕೆಂದು ಮಾನ್ಯ ಸಚಿವರನ್ನು ಕೋರುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ (ಮಾನ್ಯ ಜಲಸಂಪನ್ಮೂಲ ಸಚಿವರು)** : (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ)

ಬಂಟ್ವಾಳ ನಗರಕ್ಕೆ ನೇತ್ರಾವತಿ ನದಿಯ ಮೂಲದಿಂದ ಕುಡಿಯುವ ನೀರಿನ ಯೋಜನೆ 1998 ರಲ್ಲಿ ಅನುಷ್ಠಾನಗೊಂಡಿದ್ದು, ನೀರು ಸರಬರಾಜು ವಿತರಣಾ ಕಾಮಗಾರಿಯು ಪುರಸಭೆಯ ನಿರ್ವಹಣೆಯಲ್ಲಿದೆ. ಬಂಟ್ವಾಳ ನಗರದ ಪ್ರಸ್ತುತ ಜನಸಂಖ್ಯೆಯು 2001ರ ಜನಗಣತಿಯಂತೆ 36836 ಇದ್ದು, ಪ್ರಸ್ತುತ 42000 ಇರುತ್ತದೆ. ನಗರದ ನೀರಿನ ಬೇಡಿಕೆ 3.75 ಎಮ್‌ಎಲ್‌ಡಿ ಇದ್ದು, ಹಾಲಿ 3.68 ಎಮ್‌ಎಲ್‌ಡಿ ನೀರು ಪೂರೈಸಲಾಗುತ್ತಿದೆ. ಅಂದರೆ ತಲಾ ದಿನಂಪ್ರತಿ 100 ಲೀಟರ್‌ನಂತೆ ಸರಬರಾಜು ಮಾಡಲಾಗುತ್ತಿದೆ. ಆದರೆ ಬೇಸಿಗೆಯ 4 ತಿಂಗಳಲ್ಲಿ ತೆರೆದ ಬಾವಿಗಳಲ್ಲಿ ಅಂತರ್ಜಲ ಕುಸಿದು, ಕುಡಿಯುವ ನೀರಿನ ಸಮಸ್ಯೆ ಉಂಟಾಗುತ್ತದೆ.

ಬಂಟ್ವಾಳ ನಗರಕ್ಕೆ ಎರಡನೇ ಹಂತದ ಕುಡಿಯುವ ನೀರಿನ ಯೋಜನೆಯನ್ನು ಅಂದಾಜು ರೂ. 42.50 ಕೋಟಿಗಳಿಗೆ ಯೋಜನಾ ವರದಿಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ತಯಾರಿಸಿದ್ದು, ಪ್ರಸ್ತುತ ನೀರಿನ ಲಭ್ಯತೆ ಆಧಾರದ ಮೇಲೆ ಮುಂದಿನ 5–10 ವರ್ಷಗಳಿಗೆ ಸಾಕಾಗುವಷ್ಟು ಲಭ್ಯವಿರುವುದರಿಂದ, ತಕ್ಷಣ ವಿತರಣಾ ವ್ಯವಸ್ಥೆಯನ್ನು ಬಲಪಡಿಸಬೇಕಾಗಿರುತ್ತದೆ. ಬಂಟ್ವಾಳ ಪಟ್ಟಣಕ್ಕೆ ಹಾಲಿ ಇರುವ ನೀರು ಸರಬರಾಜು ವಿತರಣಾ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸುವ ಬಗ್ಗೆ ಸಮಗ್ರ ನೀರು ಸರಬರಾಜು ಯೋಜನೆಗೆ ಬದಲಾಗಿ ನೀರು ವಿತರಣಾ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ರೂ.25.00 ಕೋಟಿಗಳ ಅಂದಾಜು ಪಟ್ಟಿಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ತಯಾರಿಸಿ ಪುರಸಭೆಗೆ ಅನುಮೋದನೆಗಾಗಿ ಸಲ್ಲಿಸಿರುತ್ತದೆ. ಈ ಯೋಜನೆ ಕೈಗೊಳ್ಳಲು ಸರ್ವೇಕಾರ್ಯ ಮತ್ತು ಡಿ.ಪಿ.ಆರ್. ತಯಾರಿಸಲು ಕನ್ಸಲ್‌ಟೆಂಟ್‌ಗಳನ್ನು ನೇಮಿಸುವ ಉಪಕ್ರಮಕ್ಕೆ ರೂ.12.25 ಲಕ್ಷವನ್ನು ಮಂಡಳಿಗೆ ಪಾವತಿಸಲು ದಿನಾಂಕ: 4–12–2009ರಲ್ಲಿ ಪುರಸಭೆಯನ್ನು ಕೋರಲಾಗಿರುತ್ತದೆ. ಹಣವನ್ನು ಪುರಸಭೆಯು ಪಾವತಿಸಿದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಅಲ್ಲದೆ, ಪ್ರಸ್ತುತ ಮೆ॥ಏರ್‌ಕಾನ್ ಕನ್ಸಲ್‌ಟೆಂಟ್ಸ್, ಹುಬ್ಬಳ್ಳಿ ಇವರಿಗೆ ಡಿ.ಪಿ.ಆರ್., ತಯಾರಿಸಲು ಮತ್ತು ವಿವರವಾದ ಅಂದಾಜು ಪಟ್ಟಿಯನ್ನು ಸಲ್ಲಿಸಲು ವಹಿಸಿಕೊಡಲಾಗಿದ್ದು, ಸದರಿ ಅಂದಾಜು ಪಟ್ಟಿಗೆ ಪುರಸಭೆಯ ಮೇಲುರುಜು ಪಡೆದು ತದನಂತರ, ಮಂಡಳಿಯ 2010–2011ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಸೇರಿಸಿ,

ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

**(ಆ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿರುವ ಸರ್ಕಾರಿ ಮುದ್ರಣಾಲಯವನ್ನು ಸ್ಥಳಾಂತರಿಸುವ ಬಗ್ಗೆ.**

**ಶ್ರೀ ಬಿ. ರಮಾನಾಥ ರೈ :** ಸನ್ಮಾನ್ಯ ಸಭಾಧ್ಯಕ್ಷರೆ, ಬೆಳ್ತಂಗಡಿ ತಾಲ್ಲೂಕಿನ ಮಂಗಳೂರಿನಲ್ಲಿ ಒಂದು ಸರ್ಕಾರದ ಮುದ್ರಣಾಲಯವಿತ್ತು, ಚೆನ್ನಾಗಿ ಕೆಲಸ ನಡೆಯುತ್ತಿತ್ತು. ಹಂತಹಂತವಾಗಿ ಅಧಿಕಾರಿಗೆ ನಿಷ್ಕ್ರಿಯೆಯಿಂದಾಗಿ ಮುಚ್ಚುವ ಸ್ಥಿತಿಗೆ ಬಂತು. ಮಂಗಳೂರು ನಗರ ಬೆಳೆಯುತ್ತಿರತಕ್ಕಂಥ ಒಂದು ದೊಡ್ಡ ನಗರ. ಅದರಿಂದ ಈ ಸ್ಥಳೀಯ ನೌಕರರಿಗೂ ಕೂಡ ಅನುಕೂಲವಾಗುತ್ತಿತ್ತು, ಈ ಮುದ್ರಣಾಲಯ ನಮ್ಮ ಜಿಲ್ಲೆಯಲ್ಲಿದ್ದರೆ ಖಂಡಿತಾ ಒಂದು ಗೌರವವಿರುತ್ತದೆ ಎಂಬುದು ನನ್ನ ಅಭಿಪ್ರಾಯ, ಬಹುಶಃ ತಾತ್ಕಾಲಿಕವಾಗಿ ನೌಕರಿ ಮಾಡುವವರಿಗೂ ಕೂಡ ಅನುಕೂಲವಾಗುತ್ತಿತ್ತು, ಇದನ್ನು ಸ್ಥಳಾಂತರ ಮಾಡಿದ್ದಾರೆ. ಅದಕ್ಕೆ ಬೇಕಾದ ಕಟ್ಟಡ ಇನ್ನಿತರ ಎಲ್ಲಾ ವ್ಯವಸ್ಥೆಗಳಿದ್ದು ಅದನ್ನು ಅಲ್ಲಿಯೆ ಮುಂದುವರಿಸುವುದನ್ನು ಮಾಡಬೇಕೆಂದು ನಾನು ಈ ಸರ್ಕಾರದಲ್ಲಿ ಒತ್ತಾಯ ಮಾಡುತ್ತೇನೆ.

**ಶ್ರೀ ಬಸರವಾಜ ಬೊಮ್ಮಾಯಿ :** ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**(ಇ) ಬಂಡೀಪುರ ಹುಲಿ ಯೋಜನೆ ವ್ಯಾಪ್ತಿಯ ಓಂಕಾರ ವಲಯದ ಭೋಳೇ ಗೌಡನಕಟ್ಟೆ ಟೈಗರ್ ಪ್ರಿಸರ್ವ್ ಪ್ರದೇಶದಲ್ಲಿ ಗಣಿಕಾರಿಕೆಗೆ ಅನುಮತಿ ನೀಡಲು ಸರ್ಕಾರ ತೀರ್ಮಾನಿಸಿರುವ ಕುರಿತು.**

**ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ :** ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ 6 ರಕ್ಷಿತ ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆ ಮಾಡುವುದಕ್ಕೆ ಅನುಮತಿ ಕೊಟ್ಟಿದ್ದೇವೆಂದು ಒಂದು ಪ್ರಕಟಣೆ, ತೀರ್ಮಾನ ಹೊರಬಿದ್ದ ಮೇಲೆ ನಮ್ಮ ಭಾಗದಲ್ಲಿ ಬೋಳೇಗೌಡನಕಟ್ಟೆ ಎಂದು ಬಂಡೀಪುರ ಹುಲಿ ಯೋಜನೆಗೆ ಸೇರಿದ ಪ್ರದೇಶವಾಗಿದೆ. ಈ 6 ರಲ್ಲಿ ಅದು ಕೂಡ ಸೇರಿದೆ ಎಂದು ವಿಷಯ ಗೊತ್ತಾದ ಮೇಲೆ ಆ ಭಾಗದಲ್ಲಿರುವ ಸುಮಾರು 20–30 ಗ್ರಾಮಸ್ಥರೆಲ್ಲಾ ಬಹಳ ಆತಂಕಕ್ಕೆ ಒಳಗಾಗಿ, ಈಗೇನಾದರೂ ಗಣಿಗಾರಿಕೆ ಬಂದರೆ, ಈಗಾಗಲೆ ಕಾಡಿನಲ್ಲಿರುವ ಆನೆಗಳೆಲ್ಲಾ ಬಂದು ಬೆಳೆಯನ್ನೆಲ್ಲಾ ಹಾನಿಯಾಗಿ ಅವರ